# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಸಂಖ್ಯೆ : ಬಿಬಿಎಂಪಿ/ಆಯುಕ್ತರು/ಪಿಆರ್/ 34 /2019-20

ಆಯುಕ್ತರವರ ಕಛೇರಿ
ಬೃಹತ್ ಮಹಾನಗರ ಪಾಲಿಕೆ ಕಛೇರಿ
ಬೆಂಗಳೂರು,
ದಿನಾಂಕ : 22/01/2020

## ಸುತ್ತೋಲೆ

**ವಿಷಯ :** ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವ್ಯಾಪ್ತಿಯಲ್ಲಿ ಕೈಗೊಳ್ಳುವ ಕಾಮಗಾರಿಗಳಿಗೆ ನೀಡಿರುವ ಜಾಬ್‌ಸಂಖ್ಯೆಗಳ ವಿವರಗಳನ್ನು ಪಾಲಿಕೆಯ ಅಂತರ್ಜಾಲದಲ್ಲಿ ಪ್ರಕಟಿಸುವ ಬಗ್ಗೆ ಹಾಗೂ 14ನೇ ಹಣಕಾಸು ಆಯೋಗದ ಅನುದಾನಕ್ಕೆ ಮೀಸಲಿರಿಸಿರುವ ಅನುದಾನಕ್ಕೆ ದಿನಾಂಕ 28/02/2020 ರೊಳಗೆ ಜಾಬ್‌ಸಂಖ್ಯೆ ಪಡೆದು ತುರ್ತಾಗಿ ಕಾಮಗಾರಿ ಅನುಷ್ಠಾನಗೊಳಿಸುವ ಬಗ್ಗೆ.

* * * * * *

ಮೇಲಿನ ವಿಷಯಕ್ಕೆ ಸಂಬಂಧಿಸಿದಂತೆ, ಪಾಲಿಕೆಯ ಆಯವ್ಯಯದಲ್ಲಿ ಮೀಸಲಿರಿಸಿರುವ ಅನುದಾನಗಳ ಅಡಿ ಪಡೆದಿರುವ ಕಾಮಗಾರಿಗಳ ಜಾಬ್‌ಸಂಖ್ಯೆಗಳ ವಿವರಗಳು ಲಭ್ಯವಿರುವುದಿಲ್ಲವೆಂದು ಇಲಾಖಾ ಮುಖ್ಯಸ್ಥರ ಸಭೆಯಲ್ಲಿ ಮುಖ್ಯ ಅಭಿಯಂತರರುಗಳು ತಿಳಿಸಿರುತ್ತಾರೆ. 2017-18 ರಿಂದ 2019--20ರ ಸಾಲುಗಳಲ್ಲಿ ನೀಡಿರುವ ಎಲ್ಲಾ ಕಾಮಗಾರಿಯ ಜಾಬ್‌ಸಂಖ್ಯೆಗಳ ವಿವರವನ್ನು ಪಾಲಿಕೆಯ ಅಂತರ್ಜಾಲದಲ್ಲಿ ಪ್ರಕಟಿಸಲು ಸೂಚಿಸಿದೆ. ಮುಂದುವರೆದು, 2015-16ನೇ ಸಾಲಿನಿಂದ 2019-20 ರವರೆಗಿನ 5 ವರ್ಷಗಳಲ್ಲಿ ಕೇಂದ್ರ ಸರ್ಕಾರದ 14ನೇ ಹಣಕಾಸು ಆಯೋಗದ ಅನುದಾನದಡಿ ಅನುದಾನ ನೀಡುತ್ತಿದ್ದು, 2019-20ನೇ ಸಾಲಿಗೆ 14ನೇ ಹಣಕಾಸು ಆಯೋಗದ ಅನುದಾನ ಅವಧಿ ಮುಕ್ತಾಯವಾಗುತ್ತಿರುವುದರಿಂದ ನೀಡಿರುವ ಅನುದಾನವನ್ನು ಸದುಪಯೋಗಪಡಿಸಿಕೊಳ್ಳಬೇಕಿರುವುದರಿಂದ ಹಾಗೂ 14ನೇ ಹಣಕಾಸು ಆಯೋಗದ ಅನುದಾನದ ಅವಧಿಯಲ್ಲಿ ಕೈಗೊಂಡಿರುವ ಕಾಮಗಾರಿಗಳ ವಿವರಗಳನ್ನು ಒಳಗೊಂಡಂತೆ ಉಪಯುಕ್ತ ಪ್ರಮಾಣ ಪತ್ರ ಸರ್ಕಾರಕ್ಕೆ ಸಲ್ಲಿಸಬೇಕಿದೆ ಹಾಗೂ 15ನೇ ಹಣಕಾಸು ಆಯೋಗದ ಅನುದಾನ 2020-21ನೇ ಸಾಲಿನಿಂದ ಜಾರಿಗೊಳ್ಳುತ್ತಿರುವುದರಿಂದ, 2019-20ನೇ ಸಾಲಿನ 14ನೇ ಹಣಕಾಸು ಆಯೋಗದ ಅನುದಾನಕ್ಕೆ ದಿನಾಂಕ 28/02/2020 ರೊಳಗೆ ಜಾಬ್‌ಸಂಖ್ಯೆ ಪಡೆದು ಕಾಮಗಾರಿಗಳನ್ನು ಅನುಷ್ಠಾನಗೊಳಿಸಲು ಸೂಚಿಸಿದೆ. ಅನುದಾನ ಸದುಪಯೋಗಪಡಿಸದೇ ಇರುವ ಅಧಿಕಾರಿಗಳನ್ನು ನೇರ ಹೊಣೆಗಾರರನ್ನಾಗಿ ಮಾಡಲಾಗುವುದು.

ಆಯುಕ್ತರು
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

AIA
29/01

ರವರಿಗೆ,
ಮುಖ್ಯ ಅಭಿಯಂತರರು
ಪೂರ್ವ/ಪಶ್ಚಿಮ/ದಕ್ಷಿಣ/ಮಹದೇವಪುರ/ಬೊಮ್ಮನಹಳ್ಳಿ/
ಯಲಹಂಕ/ರಾಜರಾಜೇಶ್ವರಿನಗರ/ದಾಸರಹಳ್ಳಿ/ಯೋಜನೆ/ರಸ್ತೆ ಮೂಲಭೂತ ಸೌಕರ್ಯ

ಮು.ತಿ.ನೋ......

No. 646
Date 29/1/2020
CO-2
Publish
29/01/2020

ಪಾಲಿಕೆಯ ಎಲ್ಲಾ ಕಾರ್ಯಪಾಲಕ ಅಭಿಯಂತರರು
ಕಾರ್ಯಪಾಲಕ ಅಭಿಯಂತರರು (ಯೋಜನೆ)/ರಸ್ತೆ ಮೂಲಭೂತ ಸೌಕರ್ಯ/ಟಿ.ಇ.ಸಿ
ಪೂರ್ವ/ಪಶ್ಚಿಮ/ದಕ್ಷಿಣ/ಮಹದೇವಪುರ/ಬೊಮ್ಮನಹಳ್ಳಿ/
ಯಲಹಂಕ/ರಾಜಾರಜೇಶ್ವರಿನಗರ/ದಾಸರಹಳ್ಳಿ/
ತೋಟಗಾರಿಕೆ ಅಧೀಕ್ಷಕರು
ಪೂರ್ವ/ಪಶ್ಚಿಮ/ದಕ್ಷಿಣ/ಮಹದೇವಪುರ/ಬೊಮ್ಮನಹಳ್ಳಿ/
ಯಲಹಂಕ/ರಾಜಾರಜೇಶ್ವರಿನಗರ/ದಾಸರಹಳ್ಳಿ/
ಮುಖ್ಯ ಅಭಿಯಂತರರು/ಕೆರೆಗಳು/ಉಪ ನಿಯಂತ್ರಕರು (ಹಣಕಾಸು)/
ಅರಣ್ಯಾಧಿಕಾರಿಗಳು/ಎಲ್ಲಾ ವಲಯ ಕಾರ್ಯಪಾಲಕ ಅಭಿಯಂತರರು (ವಿದ್ಯುತ್)
ಉಪ ನಿರ್ದೇಶಕರು (ತೋಟಗಾರಿಕೆ)

ಪ್ರತಿಯನ್ನು:-

1. ಪೂಜ್ಯ ಮಹಾಪೌರರ ಅವಗಾಹನೆಗೆ ತರಲು ಆಪ್ತಕಾರ್ಯದರ್ಶಿ ರವರಿಗೆ ಕಳುಹಿಸಿದೆ.
2. ಮಾನ್ಯ ಉಪ ಮಹಾಪೌರರ ಅವಗಾಹನೆಗೆ ತರಲು ಆಪ್ತಕಾರ್ಯದರ್ಶಿ ರವರಿಗೆ ಕಳುಹಿಸಿದೆ.
3. ವಿಶೇಷ ಆಯುಕ್ತರು (ಯೋಜನೆ/ಹಣಕಾಸು/ಆಡಳಿತ/ಆಸ್ತಿಗಳು/ಕಂದಾಯ/ಕಲ್ಯಾಣ/ಮಾರುಕಟ್ಟೆ) ರವರ ಮಾಹಿತಿಗಾಗಿ ಕಳುಹಿಸಿದೆ.
4. ಪಾಲಿಕೆಯ ಎಲ್ಲಾ ವಲಯ ಆಯುಕ್ತರುಗಳಿಗೆ ಮಾಹಿತಿಗಾಗಿ ಕಳುಹಿಸಿದೆ.
5. ಕೌನ್ಸಿಲ್ ಕಾರ್ಯದರ್ಶಿರವರಿಗೆ ಕಳುಹಿಸುತ್ತಾ, ಆಡಳಿತ ಪಕ್ಷದ ನಾಯಕರು, ವಿರೋಧ ಪಕ್ಷದ ನಾಯಕರುಗಳಿಗೆ ಕಳುಹಿಸಿಕೊಡಲು ಕಳುಹಿಸಿದೆ.
6. ಪ್ರಧಾನ ಅಭಿಯಂತರರಿಗೆ ಮಾಹಿತಿಗಾಗಿ ಕಳುಹಿಸಿದೆ.
7. ಎಲ್ಲಾ ಅಪರ / ಜಂಟಿ ಆಯುಕ್ತರುಗಳಿಗೆ ಕಳುಹಿಸಿದೆ.
8. ಮುಖ್ಯ ಆರ್ಥಿಕ ಅಧಿಕಾರಿಗಳ ಮುಂದಿನ ಕ್ರಮಕ್ಕಾಗಿ.
9. ಮುಖ್ಯ ಲೆಕ್ಕಾಧಿಕಾರಿಗಳ ಅಗತ್ಯ ಕ್ರಮಕ್ಕಾಗಿ ಕಳುಹಿಸಿದೆ.
10. ಮಾಹಿತಿ ತಂತ್ರಜ್ಞಾನ ಸಲಹೆಗಾರರ ಮಾಹಿತಿ ಹಾಗೂ ಪಾಲಿಕೆಯ ಅಂತರ್ಜಾಲದಲ್ಲಿ ಪ್ರಕಟಿಸುವ ಸಲುವಾಗಿ ಕಳುಹಿಸಿದೆ.
11. ಕಛೇರಿ ಪ್ರತಿ.